**ಇಂದು ದಿನಾಂಕ:*04.12.2025* ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು : ವಾದಿ ಪರ ಶ್ರೀ.ಕೆ.ಆರ್.ಕೆ. ವಕೀಲರಿಂದಃ**

ನಾನು 10 ನೇ ತರಗತಿ ಓದಿದ್ದೇನೆ. ಪಾಪೇಗೌಡರ ಪರವಾಗಿ ಸಾಕ್ಷ್ಯ ಹೇಳಲು ಬಂದಿದ್ದೇನೆ. ಪ್ರಮಾಣ ಪತ್ರವನ್ನು ನಾನು ಹೇಳಿ ಬರೆಸಿಲ್ಲ. ಯಾವ ಸರ್ವೆ ನಂಬರ್ ಗೆ ಸಂಬಂಧಪಟ್ಟಂತೆ ವಿಲ್ ಬರೆದಿದ್ದಾರೆ ಎಂದು ಗೊತ್ತಿಲ್ಲ. ವಿಲ್ ಬರೆದಿರುವ ದಿನಾಂಕ ಗೊತ್ತಿಲ್ಲ. ವಿಲ್ ನಲ್ಲಿ ಬರೆದಿರುವ ಚೆಕ್ಕುಬಂಧಿ ನನಗೆ ಗೊತ್ತಿಲ್ಲ. ವಿಲ್ ಬರೆದ ಸಮಯದಲ್ಲಿ ಎಷ್ಟು ಜನ ಇದ್ದರು ಎಂದು ಗೊತ್ತಿಲ್ಲ. ವಿಲ್ ಬರೆದ ಸಮಯದಲ್ಲಿ ಯಾವ ಯಾವ ದಾಖಲೆಗಳನ್ನು ಕೊಟ್ಟಿದ್ದಾರೆ ಎಂದು ಗೊತ್ತಿಲ್ಲ. ವಿಲ್ ಬರೆದರು ಎನ್ನಲಾದ ಸಮಯದಲ್ಲಿ ಜವರೇಗೌಡರಿಗೆ ಕಣ್ಣು ಕಾಣಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಜವರೇಗೌಡರು ಅವಿದ್ಯಾವಂತರು ಎಂದರೆ ಸರಿ.

ಮಾಕೋಡು ಗ್ರಾಮದ ಸ.ನಂ.178/11 ರಲ್ಲಿ 23 ಗುಂಟೆ ಜಮೀನಿನ ಒಳಗೆ ವಾದಿ ಮನೆ ಕಟ್ಟಿಕೊಂಡು 25 ವರ್ಷಗಳಿಂದ ವಾಸವಿದ್ದಾರೆ ಎಂದರೆ ಸರಿ. ದಾವಾ ಆಸ್ತಿಯನ್ನು ಪ್ರತಿವಾದಿಗಳು ವಿಭಾಗ ಮಾಡಿಕೊಂಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ಜವರೇಗೌಡ 2 ನೇ ಪ್ರತಿವಾದಿಗೆ ಯಾವುದೇ ವಿಲ್ ಬರೆಯದಿದ್ದರೂ 2 ನೇ ಪ್ರತಿವಾದಿಗೆ ಸಹಾಯ ಮಾಡಲೆಂದು ಸುಳ್ಳು ಸಾಕ್ಷ್ಯ ಹೇಳಲು ಬಂದಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ವಾದಿಗೆ ಇರುವ 3 ನೇ ಒಂದು ಭಾಗದ ಹಕ್ಕು ತಪ್ಪಿಸಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜವರೇಗೌಡ ಯಾವುದೇ ರೀತಿ ವಿಲ್ ಬರೆದಿಲ್ಲ, ಸಹಿ ಅಥವಾ ಹೆಬ್ಬೆರಳು ಗುರುತು ಹಾಕಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

***ಓ.ಹೆ.ಕೆ.ಸರಿ ಇದೆ.***

***ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.***
**ಪಿರಿಯಾಪಟ್ಟಣ**